# ಪ್ರೊ| ಸ್ನೇಹಾ ಕುಲಕರ್ಣಿಗೆ ಪಿಎಚ್‌ಡಿ



ಹಳಿಯಾಳ: ವಿಡಿಐಟಿ ಮಹಾವಿದ್ಯಾಲಯದ ಪ್ರೊ|ಸ್ನೇಹಾ ಕುಲಕರ್ಣಿ ಪಿಎಚ್‌ಡಿ ಪದವಿ ಪಡೆದರು.

■ **ಉದಯವಾಣಿ ಸಮಾಚಾರ**

**ಹಳಿಯಾಳ:** ಪಟ್ಟಣದ ಉದ್ಯೋಗ ವಿದ್ಯಾ ನಗರದಲ್ಲಿರುವ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದ ರಸಾಯನ ಶಾಸ್ತ್ರ ವಿಭಾಗದ ಪ್ರೊ| ಸ್ನೇಹಾ ಕುಲಕರ್ಣಿ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಪಡೆದಿದ್ದಾರೆ.

ವಿಟಿಯು ದಿಂದ ಮಾನ್ಯತೆ ಪಡೆದ, ವಿಡಿಐಟಿ ಮಹಾವಿದ್ಯಾಲಯದ ರಸಾಯನಶಾಸ್ತ್ರ ಸಂಶೋಧನಾ ಕೇಂದ್ರದಲ್ಲಿ 'ಸ್ಟಡೀಸ್ ಆನ್ ಬಯೋಡೀಸಲ್ ಸಿಂಥೆಸಿಸ್ ಆ್ಯಂಡ್ ಅಪ್ಲಿಕೇಶನ್ ಆಫ್ ಬಯೋ ಪ್ರಾಡಕ್ಟ್' ಎಂಬ ವಿಷಯದಲ್ಲಿ ಡಾ| ಆರ್. ಎಸ್.ಮಲ್ಲಾಡಿ ಮಾರ್ಗದರ್ಶನದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಿದ್ದರು.

ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಗುವಾಹಟಿಯ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ| ಕೌಸ್ತುಭ ಮೊಹಾಂತಿ ಪರೀಕ್ಷಕರಾಗಿ ಆಗಮಿಸಿದ್ದರು. ಇತ್ತೀಚೆಗೆ ಬೆಂಗಳೂರಿನಲ್ಲಿ ಇವರ ಸಮ್ಮುಖದಲ್ಲಿ ಸ್ನೇಹ ಕುಲಕರ್ಣಿ ತಮ್ಮ ಸಂಶೋಧನಾ ಪ್ರಬಂಧ ಮಂಡಿಸಿದ್ದರು.

ಸ್ನೇಹ ಅವರ ಸಾಧನೆಗೆ ಆಡಳಿತ ಮಂಡಳಿ ಅಧ್ಯಕ್ಷ ವಿನಾಯಕ ಲೋಕುರ್, ಪ್ರಾಚಾರ್ಯ ಡಾ| ವಿ.ಎ. ಕುಲಕರ್ಣಿ ಮತ್ತು ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ.

# ಸ್ನೇಹಾ ಕುಲಕರ್ಣಿಗೆ ಪಿಎಚ್‌ಡಿ ಗೌರವ

ನುಡಿಜೇನು ವರದಿ

**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ರಸಾಯನಶಾಸ್ತ್ರ ವಿಭಾಗದ ಪ್ರೊ.ಸ್ನೇಹಾ ಕುಲಕರ್ಣಿ ವಿಟಿಯುದಿಂದ ಪಿಹೆಚ್‌ಡಿ ಪಡೆದಿದ್ದಾರೆ. ವಿಟಿಯುದಿಂದ ಮಾನ್ಯತೆ ಪಡೆದ ವಿಡಿಐಟಿ ಮಹಾವಿದ್ಯಾಲಯದ ರಸಾಯನಶಾಸ್ತ್ರ ಸಂಶೋಧನಾ ಕೇಂದ್ರದಲ್ಲಿ ಸ್ಟಡೀಸ್ ಆನ್ ಬಯೋಡೀಸಲ್ ಸಿಂಥೆಸಿಸ್ ಅಂಡ್ ಅಪ್ಲಿಕೇಶನ್ ಆಫ್ ಬಯೋ ಪ್ರಾಡಕ್ಟ್ ಎಂಬ ವಿಷಯದ ಮೇಲೆ ಡಾ.ಆರ್.ಎಸ್.ಮಲ್ಲಾಡಿ ಮಾರ್ಗದರ್ಶನದಲ್ಲಿ ಪಿಎಚ್‌ಡಿ ಪೂರ್ಣಗೊಳಿಸಿದ್ದಾರೆ.

ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಗುವಾಹಟಿಯ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ಕೌಸ್ತುಭ ಮೋಹಾಂತಿ ಪರೀಕ್ಷಕರಾಗಿ ಆಗಮಿಸಿದ್ದರು. ಇತ್ತೀಚಿಗೆ ಬೆಂಗಳೂರಿನಲ್ಲಿ ಇವರ ಸಮ್ಮುಖದಲ್ಲಿ ಸ್ನೇಹ ಕುಲಕರ್ಣಿ ತಮ್ಮ ಸಂಶೋಧನೆಯನ್ನು ಮಂಡಿಸಿದರು. ವಿಟಿಯುದಿಂದ ಮಾನ್ಯತೆ ಪಡೆದ ಮಹಾವಿದ್ಯಾಲಯದ 7 ಸಂಶೋಧನಾ ಕೇಂದ್ರಗಳಲ್ಲಿ ನಡೆಯುತ್ತಿರುವ ಸಂಶೋಧನಾ ಕಾರ್ಯಕ್ಕೆ ಆಡಳಿತ ಮಂಡಳಿಯ ಅಧ್ಯಕ್ಷ ವಿನಾಯಕ ಲೋಕುರ್ ಹರ್ಷ ವ್ಯಕ್ತಪಡಿಸಿ ಶುಭ ಕೋರಿದ್ದಾರೆ.

ಪ್ರೊ.ಸ್ನೇಹಾ ಕುಲಕರ್ಣಿ ಅವರನ್ನು ಈ ಸಾಧನೆಗೆ ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಮತ್ತು ಎಲ್ಲ ಬೋಧಕ– ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.